# ಸಮಗ್ರ ಕರಸಮಾಧಾನ ಯೋಜನೆ–2019 ರ ಬಗ್ಗೆ ಪತ್ರಿಕಾ ಪ್ರಕಟಣೆ

ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನಕ್ಕೂ ಮೊದಲು ವಾಣಿಜ್ಯ ತೆರಿಗೆಗಳ ಇಲಾಖೆಯು ನಿರ್ವಹಿಸುತ್ತಿದ್ದ ಎಲ್ಲಾ ಕಾಯ್ದೆಗಳ ಅಡಿಯಲ್ಲಿ ಇರುವ ಬಾಕಿ ತೆರಿಗೆಗೆ ಕರಸಮಾಧಾನ ಯೋಜನೆಯನ್ನು ವಿಸ್ತರಿಸುವಂತೆ ವಾಣಿಜ್ಯೋದ್ಯಮಗಳು ಮಾಡಿದ ಮನವಿಯನ್ನು ಪರಿಗಣಿಸಿ, ಮಾನ್ಯ ಮುಖ್ಯಮಂತ್ರಿಯವರು ತೆರಿಗೆ ಬಾಕಿಯನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದು **'ಸಮಗ್ರ ಕರಸಮಾಧಾನ ಯೋಜನೆ'** ಯನ್ನು ಫೆಬ್ರವರಿ 2019 ರ ತಮ್ಮ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ.

ಆಯವ್ಯಯದ ಘೋಷಣೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಒಂದು 'ಸಮಗ್ರ ಕರಸಮಾಧಾನ ಯೋಜನೆ–2019' ನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 9 ಸಿಎಸ್‌ಎಲ್ 2019, ದಿನಾಂಕ: 21ನೇ ಫೆಬ್ರವರಿ 2019 ರಂತೆ ಜಾರಿಗೊಳಿಸಲಾಗಿರುತ್ತದೆ. ಇದು ಅತ್ಯಂತ ಸಮಗ್ರತೆಯಿಂದ ಕೂಡಿದ್ದು, ವಾಣಿಜ್ಯ ತೆರಿಗೆಗಳ ಇಲಾಖೆಯು ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದ ಪೂರ್ವದಲ್ಲಿ ನಿರ್ವಹಿಸುತ್ತಿದ್ದ ಈ ಕೆಳಕಂಡ ಎಲ್ಲಾ ಕಾಯ್ದೆಗಳಡಿಯಲ್ಲಿನ ತೆರಿಗೆ ಬಾಕಿಗಳಿಗೆ ಸಂಬಂಧಿಸಿದಂತೆ ಪರಿಹಾರವನ್ನು ಒದಗಿಸುತ್ತದೆ.

1. ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ, 1957,
2. ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ, 2003,
3. ಕೇಂದ್ರ ಮಾರಾಟ ತೆರಿಗೆ ಕಾಯ್ದೆ, 1956,
4. ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ, 1979,
5. ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಕಾಯ್ದೆ, 1979,
6. ಕರ್ನಾಟಕ ವಿಲಾಸ ತೆರಿಗೆ ಕಾಯ್ದೆ, 1979,
7. ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ, 1958, ಮತ್ತು
8. ಕರ್ನಾಟಕ ಕೃಷಿ ವರಮಾನ ತೆರಿಗೆ ಕಾಯ್ದೆ, 1957.

ಈ ಯೋಜನೆಯ ಸಮಗ್ರತೆಗೆ ಕಾರಣವಾಗುವ ಇನ್ನೊಂದು ಲಕ್ಷಣವೇನೆಂದರೆ, ಈ ಯೋಜನೆಯ ಪರಿಧಿಯೊಳಗೆ ಮೊದಲ ಬಾರಿಗೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ, 2003 ರ ಅಡಿಯಲ್ಲಿ ಮಾಸಿಕ ವರದಿಗಳನ್ನು ಸಲ್ಲಿಸದೇ ಇರುವ ಕಾರಣಕ್ಕಾಗಿ ಹಾಗೂ ವ್ಯಾಟ್–240 ಸಲ್ಲಿಸದೇ ಇರುವ ಕಾರಣಕ್ಕಾಗಿ ಕ್ರಮವಾಗಿ ಕಲಂ 72(1)(ಎ) ಅಥವಾ 72(1)(ಬಿ) ಮತ್ತು 74(4) ರ ಅಡಿಯಲ್ಲಿ ವಿಧಿಸಲಾಗಿರುವ ದಂಡಗಳನ್ನೂ ಒಳಗೊಂಡಿರುವುದು ಆಗಿರುತ್ತದೆ. ಅಲ್ಲದೇ, ಮೊದಲ ಬಾರಿಗೆ ಮೇಲೆ ನಮೂದಿಸಿರುವ ಎಲ್ಲಾ ಕಾಯ್ದೆಗಳಡಿಯಲ್ಲಿನ ಸಂಬಂಧಿಸಿದ ತೆರಿಗೆಯ ಪೂರ್ಣ ಪಾವತಿಸುವ ಷರತ್ತಿಗೆ ಒಳಪಟ್ಟು, ಎಲ್ಲಾ ಬಾಕಿ ತೆರಿಗೆಯ ಮೇಲೆ ವಿಧಿಸಲಾದ ದಂಡ ಮತ್ತು ಬಡ್ಡಿಯನ್ನು ಶೇ.100 ರಷ್ಟು ಮನ್ನಾ ಮಾಡುವುದನ್ನು ಈ ಯೋಜನೆಯು ಒಳಗೊಂಡಿರುತ್ತದೆ. ಈ ಯೋಜನೆಯನ್ನು ಆಯ್ಕೆ ಮಾಡಿಕೊಂಡ ವರ್ತಕರು ಒಂದು ವೇಳೆ ಹೆಚ್ಚುವರಿಯಾಗಿ ಪಾವತಿಸಿದ್ದಲ್ಲಿ ಮರುಪಾವತಿಗೆ ಅರ್ಹರಲ್ಲ ಎಂಬ ಷರತ್ತಿಗೆ ಒಳಪಟ್ಟು, ಮನವಿಯನ್ನು ಸಲ್ಲಿಸುವ ಸಮಯದಲ್ಲಿ ಈಗಾಗಲೇ ಪಾವತಿಸಲಾಗಿರುವ ಬಡ್ಡಿ ಅಥವಾ ದಂಡವನ್ನು ಬಾಕಿ ತೆರಿಗೆಗೆ ಸರಿದೂಗಿಸುವ ಸೌಲಭ್ಯವನ್ನೂ ಸಹ ಇದು ಒಳಗೊಂಡಿರುತ್ತದೆ.

ಸಾಕಷ್ಟು ಸಮಯಾವಕಾಶ ನೀಡಿರುವುದು ಈ ಯೋಜನೆಯ ಒಂದು ಪ್ರಮುಖ ಅಂಶವಾಗಿದ್ದು, 30.6.2019 ರವರೆಗೆ ಈಗಾಗಲೇ ವಿಲೇವಾರಿ ಮಾಡಲಾದ / ವಿಲೇವಾರಿ ಮಾಡಬೇಕಾದ ಕರನಿರ್ಧಾರಣೆ/ಮರು–ಕರನಿರ್ಧಾರಣೆಗಳಲ್ಲಿನ ತೆರಿಗೆ ಬಾಕಿಯು ಸಹ ಈ ಯೋಜನೆಗೆ ಅರ್ಹರಿರುತ್ತವೆ ಮತ್ತು ಬಾಕಿ ತೆರಿಗೆ ಮೊತ್ತವನ್ನು ಪಾವತಿಸಲು 30.9.2019 ರವರೆಗೆ ಕಾಲಾವಕಾಶವನ್ನು ನೀಡಲಾಗಿದೆ. ಅಂದರೆ ವರ್ತಕರಿಗೆ ಈ ಯೋಜನೆಯ ಲಾಭಗಳನ್ನು ಪಡೆಯಲು **200 ದಿನಗಳಿಗೂ** ಅಧಿಕ ಕಾಲಾವಕಾಶದ ಸುವರ್ಣಾವಕಾಶವನ್ನು ಒದಗಿಸುತ್ತದೆ.

**ಪಾರದರ್ಶಕ, ಸುಲಲಿತವಾದ ಕಾರ್ಯ ವಿಧಾನವನ್ನು ಸಹ ಜಾರಿಗೊಳಿಸಲಾಗಿದ್ದು, ಅದರಂತೆ ವರ್ತಕರು ಜಾಲತಾಣ http://gst.kar.nic.in ಅಥವಾ http://ctax.kar.nic.in ಗೆ ಲಾಗಿನ್ ಆಗಿ, ನಿಗದಿತ ಅರ್ಜಿಯನ್ನು ಭರ್ತಿ ಮಾಡಿ, ಆನ್‌ಲೈನ್‌ನಲ್ಲಿಯೇ ಪಾವತಿಯನ್ನು ಮಾಡಬಹುದಾಗಿರುತ್ತದೆ.** ಯೋಜನೆಯನ್ವಯ ಸಂಬಂಧಿಸಿದ ಅಧಿಕಾರಿಗಳು ಅರ್ಜಿಗಳಲ್ಲಿರಬಹುದಾದ ನ್ಯೂನತೆಗಳನ್ನು 15 ದಿನಗಳ ಒಳಗಾಗಿ ಅರ್ಜಿದಾರರಿಗೆ ತಿಳಿಸಬೇಕಾಗಿದ್ದು, ಇದು ಯೋಜನೆಯ ಉಪಯುಕ್ತತೆಯನ್ನು ಖಾತ್ರಿಪಡಿಸಿಕೊಳ್ಳಲು ಅಧಿಕಾರಿಗಳ ಬದ್ಧತೆಯನ್ನು ಖಾತ್ರಿಪಡಿಸುತ್ತದೆ.

ಆದರೆ ಮನವಿ ಅಥವಾ ಪರಿಷ್ಕರಣೆ ಕೋರಿ ವಿವಿಧ ಮೇಲ್ಮನವಿ ಪ್ರಾಧಿಕಾರಗಳಲ್ಲಿ ಮತ್ತು ನ್ಯಾಯಾಲಯಗಳಲ್ಲಿ ರಾಜ್ಯವು ಮನವಿ ಸಲ್ಲಿಸಿರುವ ಪ್ರಕರಣಗಳಿಗೆ ಹಾಗೂ ಯಾವುದಾದರೂ ಪ್ರಾಧಿಕಾರವು 21.2.2019 ರಲ್ಲಿದ್ದಂತೆ ಸ್ವಯಂ ಪರಿಷ್ಕರಣೆಯನ್ನು ಪ್ರಾರಂಭಿಸಿದ್ದರೆ ಹಾಗೂ 30.6.2019 ರ ನಂತರ ಆದೇಶಗಳನ್ನು 30.6.2019 ರ ನಂತರ ತಿದ್ದುಪಡಿ ಮಾಡಿದ್ದರೆ ಅಂತಹ ಪ್ರಕರಣಗಳಿಗೆ ಈ ಯೋಜನೆಯು ಅನ್ವಯಿಸುವುದಿಲ್ಲ. ಮುಂದುವರೆದು, ಕೇಂದ್ರ ಮಾರಾಟ ತೆರಿಗೆ ಕಾಯ್ದೆ, 1956 ರ ಕಲಂ 10–ಎ ರಿಂದ ಉದ್ಭವಿಸುವ ದಂಡಗಳಿಗೆ ಈ ಯೋಜನೆಯು ಅನ್ವಯಿಸುವುದಿಲ್ಲ.

ಆದುದರಿಂದ, ರಾಜ್ಯದ ಎಲ್ಲಾ ವರ್ತಕರೂ, ಬಾಕಿ ತೆರಿಗೆ ಮೊತ್ತಗಳನ್ನು ಪಾವತಿಸಿ, ಬಡ್ಡಿ ಹಾಗೂ ದಂಡದ ಮನ್ನಾ ಕೋರಿ **"ಸಮಗ್ರ ಕರಸಮಾಧಾನ ಯೋಜನೆ–2019"** ನ್ನು ಆಯ್ಕೆ ಮಾಡಿಕೊಳ್ಳುವಂತೆ ಕೋರಲಾಗಿದೆ.

(ಎಂ.ಎಸ್.ಶ್ರೀಕರ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು